# ಜಾಣ ಹಕ್ಕಿ

■ ನಾಗೇಶ ಜಿ. ವೈದ್ಯ
ಚಿತ್ರ: ವಿಜಯ ಕುಮಾರಿ ಆರ್.



ಕಾಡಿನ ಗೂಡನ್ನು ತೊರೆದು
ಹಾರಿ ಬಂದ ಹಕ್ಕಿಯೊಂದು
ಕೆಸರಿನಲ್ಲಿ ಸಿಕ್ಕಿಕೊಂಡು
ಬಿಕ್ಕಿ ಅತ್ತಿತು

ಇದನು ಕಂಡ ನಾಯಿಯೊಂದು
ನಾಲಿಗೆ ಹೊರ ಚಾಚಿಕೊಂಡು
ಹಕ್ಕಿಯೊಂದು ಸಿಕ್ಕಿತೆಂದು
ಜೊಲ್ಲು ಸುರಿಸಿತು

ತನ್ನ ಕೈಯ ಮುಂದೆ ಚಾಚಿ
ಕೆಸರಿನಿಂದ ಮೇಲಕೆತ್ತಿ
ಈಗಲೇ ತಿನುವೆನೆನುತ
ಹಲ್ಲು ಮಸೆಯಿತು

ಇದನು ಅರಿತ ಜಾಣ ಹಕ್ಕಿ
ಪ್ರಾಣವನ್ನು ಉಳಿಸಿಕೊಳಲು
ತನ್ನ ಭಯವ ತೋರಗೊಡದೆ
ಹೀಗೆ ಹೇಳಿತು

ನನ್ನ ದೇಹವೆಲ್ಲ ಈಗ
ತುಂಬಿಹುದು ಕೆಸರಿನಿಂದ
ತೊಳೆದು ತಿನ್ನದಿರಲು ರೋಗ
ಖಚಿತವೆಂದಿತು

ಸಲಹೆಯನ್ನು ಒಪ್ಪಿ ನಾಯಿ
ಹಕ್ಕಿಯನ್ನು ಕೆರೆಗೆ ಒಯ್ದು
ಅದರ ಮೈಯ ತಿಕ್ಕಿ ತೊಳೆದು
ಕೊರಳ ಹಿಡಿಯಿತು

ಮತ್ತೆ ತಡೆದ ಜಾಣ ಹಕ್ಕಿ
ಒಣಗಿಸದೇ ತಿನಲು ನನ್ನ
ಶೀತ, ನೆಗಡಿ, ಕೆಮ್ಮು ನಿನಗೆ
ಬರುವುದೆಂದಿತು

ಆಸೆ ಅದುಮಿಕೊಂಡು ನಾಯಿ
ಬಿಸಿಲಿನಲ್ಲಿ ಒಣಗಲೆಂದು
ಹಕ್ಕಿಯನ್ನು ಬಯಲಲಿಟ್ಟು
ಕಾಯತೊಡಗಿತು

ಬಿಸಿಲಿನಲ್ಲಿ ನೀರು ಆರಿ
ರೆಕ್ಕೆ ಒಣಗಿ ತೆರೆದುಕೊಳಲು
ಜಾಣ ಹಕ್ಕಿ ಪುರ್ರೆಂದು
ನಭಕೆ ಹಾರಿತು ■

---

## ಕುಂಚ ಪ್ರಪಂಚ



**ಅದ್ವಿಕಾ ಪ್ರಸಾದ್**
3ನೇ ತರಗತಿ
ಬೊಲ್ಟನ್ ಸ್ಕೂಲ್, ಯುಕೆ



**ಐಶ್ವರ್ಯ ಎಚ್.ಬಿ.**
ಹತ್ತನೇ ತರಗತಿ
ಸಂತ ಜೋಸೆಫ್ ಸ್ಕೂಲ್, ಹಾಸನ



